# ಶುದ್ಧ ನೀರಿನ ಸವಾಲು

**ಕುಡಿಯುವ ನೀರಿನ ಹಾಹಾಕಾರ ಅಭಿವೃದ್ಧಿಯ ಪಥದಲ್ಲಿ ದೊಡ್ಡ ಅಡ್ಡಗಾಲು. ಮುಂಗಾರು ಕೈಕೊಟ್ಟಿರುವ ಈ ಸನ್ನಿವೇಶದಲ್ಲಿ ಕುಡಿಯುವ ನೀರಿನ ಬರವೂ ನಿರೀಕ್ಷಿತವೇ. ಇಂತಹ ಸಂದರ್ಭದಲ್ಲಿ ರಾಜ್ಯದ 680 ಹಳ್ಳಿಗಳಿಗೆ ಕ್ಯಾನ್‌ಗಳಲ್ಲಿ ಶುದ್ಧ ಕುಡಿಯುವ ನೀರು ಒದಗಿಸುವ ಯೋಜನೆ ಸಿದ್ಧವಾಗುತ್ತಿರುವುದು ನಿರೀಕ್ಷೆಗಳನ್ನು ಗರಿಗೆದರಿಸಿದೆ.**

ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದು 65 ವರ್ಷಗಳು ಕಳೆದಿವೆ. ಆದರೆ ಕುಡಿಯುವ ನೀರಿನ ಸಮಸ್ಯೆ ಮಾತ್ರ ಇನ್ನೂ ಬಗೆಹರಿದಿಲ್ಲ. ಒಂದೆಡೆ ಒಂದು ಕೊಡ ಕುಡಿಯುವ ನೀರಿಗಾಗಿ ಮೈಲಿಗಟ್ಟಲೆ ಮಹಿಳೆಯರು ನಡೆಯಬೇಕಾದ ಸ್ಥಿತಿ. ಮತ್ತೊಂದೆಡೆ ನೀರಿನ ಟ್ಯಾಂಕರ್‌ಗಳ ಮುಂದೆ ಗಂಟೆಗಟ್ಟಲೆ ಸಾಲುಗಳಲ್ಲಿ ಕಾಯುವ ಸ್ಥಿತಿ. ಕುಡಿಯುವ ನೀರಿನ ಈ ಹಾಹಾಕಾರ ತಣಿಸುವುದೇ ರಾಷ್ಟ್ರದ ಮುಂದಿರುವ ದೊಡ್ಡ ಸವಾಲು.

ಈ ಬಾರಿಯಂತೂ ರಾಷ್ಟ್ರದ ಬಹುತೇಕ ಭಾಗಗಳಲ್ಲಿ ಮುಂಗಾರು ವಿಫಲವಾಗಿದೆ. ಬರದ ಸ್ಥಿತಿ ಎದುರಿಸಲು ಸಿದ್ಧವಾಗಿರಬೇಕೆಂದು ಕೇಂದ್ರ ಕುಡಿಯುವ ನೀರು ಹಾಗೂ ಸ್ವಚ್ಛತೆ ಸಚಿವಾಲಯ ಈಗಾಗಲೇ ರಾಜ್ಯಸರ್ಕಾರಗಳಿಗೆ ಪತ್ರ ಬರೆದಿರುವುದೂ ಗೊತ್ತಿರುವ ಸಂಗತಿಯೇ. ರಾಜ್ಯದಲ್ಲೂ ವರುಣ ಕೃಪೆ ತೋರಿಲ್ಲ. ಹೀಗಾಗಿ ರಾಜ್ಯದ 680ಕ್ಕೂ ಹೆಚ್ಚು ಗ್ರಾಮಗಳು ಕುಡಿಯುವ ನೀರಿನ ಕೊರತೆ ಅನುಭವಿಸುತ್ತಿವೆ.

ಇಂತಹ ಸಂದರ್ಭದಲ್ಲಿಯೇ ಮುಂದಿನ ಬೇಸಿಗೆ ಹೊತ್ತಿಗೆ ರಾಜ್ಯದ 680 ಹಳ್ಳಿಗಳಲ್ಲಿ ಮನೆ ಮನೆಗೆ ಶುದ್ಧ ನೀರು ಪೂರೈಸುವ ಮಹತ್ವಾಕಾಂಕ್ಷೆಯ ಯೋಜನೆಗೆ ರಾಜ್ಯ ಸಜ್ಜಾಗುತ್ತಿದೆ ಎಂಬ ಮಾಹಿತಿ ಒಂದಿಷ್ಟು ಭರವಸೆಯ ಕಿರಣವಾಗಿದೆ. ಈ ಯೋಜನೆಯ ಅನುಷ್ಠಾನ ಹೊಣೆಯನ್ನು ಪಂಚಾಯತ್ ಎಂಜಿನಿಯರಿಂಗ್ ಇಲಾಖೆ ಹಾಗೂ ಖಾಸಗಿ ಏಜೆನ್ಸಿಗೆ ಒಪ್ಪಿಸಲಾಗಿದೆ.

ಈ ಯೋಜನೆಯ ಪ್ರಕಾರ ಗ್ರಾಮಗಳಲ್ಲಿ ನೀರು ಶುದ್ಧೀಕರಣ ಘಟಕಗಳನ್ನು ಖಾಸಗಿ ಏಜೆನ್ಸಿಯೇ ತೆರೆಯಲಿದೆ. ಆರಂಭದಲ್ಲಿ ಗ್ರಾಮದ ಪ್ರತಿ ಕುಟುಂಬಕ್ಕೆ ಪ್ರತಿದಿನ 20 ಲೀಟರ್ ನೀರನ್ನು ಕ್ಯಾನ್ ಮೂಲಕ ಒದಗಿಸಲಾಗುವುದು. ಒಂದು ಕ್ಯಾನ್ ಬೆಲೆ ರೂ 4 ಮಾತ್ರ ಆಗಿರುತ್ತದೆ ಎಂದು ಹೇಳಲಾಗಿದೆ. ಸ್ವತಃ ಏಜೆನ್ಸಿಯೇ ಮನೆಮನೆಗೆ ತೆರಳಿ ನೀರಿನ ಕ್ಯಾನ್‌ಗಳನ್ನು ವಿತರಿಸಲಿದೆ. ಇದರಿಂದ ನೀರಿಗಾಗಿ ಅಲೆಯಬೇಕಿರುವ ಬಹಳಷ್ಟು ಮಹಿಳೆಯರ ಶ್ರಮ, ಸಮಯ ಉಳಿತಾಯವಾಗುತ್ತದೆ ಎಂಬುದು ನಿರೀಕ್ಷೆ.

ಈ ಮಾದರಿಯಲ್ಲಿ ಹಳ್ಳಿಗಳಿಗೆ ಶುದ್ಧ ನೀರು ಪೂರೈಕೆ ಹೊಚ್ಚಹೊಸ ಪರಿಕಲ್ಪನೆಯಲ್ಲ. ಈ ಬಗೆಯಲ್ಲಿ ಹಳ್ಳಿಗಳಿಗೆ ಶುದ್ಧ ನೀರು ಒದಗಿಸುವ ಕಾರ್ಯವನ್ನು ರಾಷ್ಟ್ರದಲ್ಲಿ ಅನೇಕ ಸರ್ಕಾರೇತರ ಸಂಸ್ಥೆಗಳು ಇತ್ತೀಚೆಗೆ ಆರಂಭಿಸಿವೆ. ಈ ನಿಟ್ಟಿನಲ್ಲಿ ಮಾಜಿ ಸಚಿವ ಎಚ್.ಕೆ. ಪಾಟೀಲ ಅವರು ಉತ್ತರ ಕರ್ನಾಟಕದಲ್ಲಿ ನಡೆಸಿರುವ ಪ್ರಯೋಗ ಈಗಾಗಲೇ ಗಮನ ಸೆಳೆದಿದೆ. ಗದಗ ಜಿಲ್ಲೆ ಹುಲಕೋಟಿಯಲ್ಲಿ ಪಾಟೀಲರ ತಂದೆಯ ಹೆಸರಿನಲ್ಲಿರುವ 'ಕೆ.ಎಚ್.ಪಾಟೀಲ ಪ್ರತಿಷ್ಠಾನ ಹಾಗೂ ಗ್ರಾಮೀಣ ವೈದ್ಯಕೀಯ ಸೇವಾ ಸಂಸ್ಥೆ' ವತಿಯಿಂದ ನೀರು ಶುದ್ಧೀಕರಣ ಘಟಕಗಳನ್ನು ಉತ್ತರ ಕರ್ನಾಟಕದ ಅನೇಕ ಗ್ರಾಮಗಳಲ್ಲಿ ಅಳವಡಿಸಲಾಗಿದೆ. ಈ ಘಟಕಗಳು ಕೆರೆ ನೀರನ್ನು ಶುದ್ಧೀಕರಿಸಿ ಕುಡಿಯಲು ಯೋಗ್ಯವಾಗುವಂತೆ ಮಾಡುತ್ತವೆ. ಫ್ಲೋರೈಡ್‌ಯುಕ್ತ ನೀರನ್ನೂ ಈ ಘಟಕಗಳಲ್ಲಿ ಶುದ್ಧೀಕರಿಸುವುದು ಸಾಧ್ಯ. ಈ ನೀರು ಪಡೆಯಲು ಗ್ರಾಮಸ್ಥರು ಪ್ರತಿ ಒಂದು ಲೀಟರ್‌ಗೆ 10 ಪೈಸೆ ನೀಡಬೇಕು. ಈ ವರ್ಷಾಂತ್ಯಕ್ಕೆ ಉತ್ತರ ಕರ್ನಾಟಕದ ಸುಮಾರು 150 ಹಳ್ಳಿಗಳಲ್ಲಿ ನೀರು ಶುದ್ಧೀಕರಣ ಘಟಕಗಳನ್ನು ಆರಂಭಿಸುವ ಗುರಿ ಹೊಂದಿರುವುದಾಗಿಯೂ ಎಚ್.ಕೆ.ಪಾಟೀಲ್ ಹೇಳಿಕೊಂಡಿದ್ದಾರೆ.

'ಸುರಕ್ಷಿತವಾದ ಕುಡಿಯುವ ನೀರಿಲ್ಲ' ಎಂದಾದಲ್ಲಿ ಅದು ಕಾಯಿಲೆಗಳಿಗೆ ಆಹ್ವಾನ ಎಂದೇ ನಾವು ತಿಳಿಯಬೇಕು. ವಿಶ್ವಬ್ಯಾಂಕ್‌ನ ವರದಿಯೊಂದರ ಪ್ರಕಾರ ಶೇಕಡಾ 21ರಷ್ಟು ಸಾಂಕ್ರಾಮಿಕ ಕಾಯಿಲೆಗಳಿಗೆ ಅಶುದ್ಧ ನೀರೇ ಕಾರಣ. ಈಗಲೂ ಅಶುದ್ಧ ನೀರಿನಿಂದ ಬರುವಂತಹ ವಾಂತಿಬೇಧಿಗೆ ಲಕ್ಷಾಂತರ ಮಕ್ಕಳು ಬಲಿಯಾಗುತ್ತಿದ್ದಾರೆ. ಹೆಪಾಟಿಟಿಸ್ ಎ, ಜ್ವರ, ಜಾಂಡೀಸ್, ಕರುಳಿನ ಕಾಯಿಲೆಗಳು, ಕಣ್ಣು ಹಾಗೂ ಚರ್ಮದ ಸೋಂಕುಗಳು – ಹೀಗೆ ಅಶುದ್ಧ ನೀರಿನ ಫಲಗಳಾದ ಆರೋಗ್ಯ ಸಮಸ್ಯೆಗಳ ಪಟ್ಟಿ ಬೆಳೆಯುತ್ತಲೇ ಸಾಗುತ್ತದೆ. ಇದರಿಂದಾಗಿ ಆರೋಗ್ಯ ನಿಗಾ ವ್ಯವಸ್ಥೆಯ ಮೇಲೆ ಅನಗತ್ಯವಾದ ಹೊರೆ ಮತ್ತು ಖರ್ಚು ಬೀಳುತ್ತದೆ. ಜನರ ದುಡಿಮೆಯ ದಿನಗಳೂ ನಷ್ಟವಾಗುತ್ತವೆ. ಶುದ್ಧ ನೀರನ್ನು ಪೂರೈಸಿದರೆ ಅನಾರೋಗ್ಯದ ವಿರುದ್ಧ ಸೆಣಸಲು ಇಲಾಖೆ ಮಾಡಬೇಕಾದ ಖರ್ಚಿನ ಹೊರೆಯೂ ಕಡಿಮೆಯಾಗುತ್ತದೆ.

ರಾಷ್ಟ್ರದಲ್ಲಿ ಅನೇಕ ಭಾಗಗಳಲ್ಲಿ ನೀರಿನ ಗುಣಮಟ್ಟ ಆತಂಕಕಾರಿ. ನೀರಿನಲ್ಲಿನ ಫ್ಲೋರೈಡ್, ಆರ್ಸೆನಿಕ್ ಅಲ್ಲದೆ ಕಬ್ಬಿಣದ ಅಂಶವೂ ಕಳವಳಕ್ಕೆ ಕಾರಣವಾಗುವಂತಹದ್ದು. ಈ ಸವಾಲುಗಳ ನಿರ್ವಹಣೆಯೂ ಮುಖ್ಯ. ಏಕೆಂದರೆ 'ಎಲ್ಲರಿಗೂ ಶುದ್ಧ ಕುಡಿಯುವ ನೀರು' ಎಂಬುದು ಮೂಲಭೂತ ಮಾನವ ಹಕ್ಕು ಎಂಬುದನ್ನು ಮರೆಯದಿರೋಣ.

■ ಸಿ.ಜಿ.ಮಂಜುಳಾ

